ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1531/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಹನೀಫ್ ಸಾಬ್** | | |
| **ತಂದೆ:ಹೆಸರು** | **ಗೌಸ್ ಮೋಹಿನುದ್ದೀನ್** | **ಪಿಡಬ್ಲೂ:** | **3** |
| **ವಯಸ್ಸು** | **51 ವರ್ಷ** | **ಸಿಡಬ್ಲೂ:** | **2** |
| **ಉದ್ಯೋಗ:** | **ವ್ಯವಸಾಯ** | | |
| **ವಾಸ ಸ್ಥಳ:** | **ಹುಡಾ** | | |

**ದಿನಾಂಕ 28-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ನನ್ನ ಹೆಂಡತಿ. ಚಾಸಾ-3 ನನ್ನ ಮಗ. ಚಾಸಾ-4 ರಿಂದ 7 ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಘಟನಾ ಸ್ಥಳದ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೋ ನೋಡಿ ಗುರುತಿಸಿರುತ್ತಾರೆ. ಪೋಲೀಸರಿಗೆ ಘಟನಾ ಸ್ಥಳವನ್ನು ನಾನೇ ತೋರಿಸಿದ್ದೆ. ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಫೋಟೋವನ್ನು ತೋರಿಸಲಾಗಿ, ಅದರಲ್ಲಿರುವ ಚಾಸಾ-6 & 7 ರವರುನ್ನು ಗುರುತಿಸಿರುತ್ತಾರೆ. ಸದರಿ ಫೋಟೋಗೆ

ಸಿಡಿ & ಕಲಂ.65 ಬಿ ಪ್ರ.ಪತ್ರ ಇಲ್ಲದೇ ಇರುವುದರಿಂದ ಫೋಟೋವನ್ನು ಕಡತದಲ್ಲಿ ಹಾಗೆಯೇ ಇರಿಸಲಾಯಿತು.

ದಿ.01-12-2021 ರಂದು ನಾನು, ನನ್ನ ಹೆಂಡತಿ & ಚಾಸಾ-3 ರವರು ಸೇರಿ ನಾವು ಬೆಳೆದ ಬೆಳೆಯನ್ನು ಕಟಾವು ಮಾಡಲು ಹೋಗಿದ್ದೆವು. ಮ. 2 ಗಂಟೆಯ ಕಾಲಕ್ಕೆ ಮಿಷನ್‌ನ ಚಾಲಕ ಊಟಕ್ಕೆ ಹೋಗಿದ್ದರು. ಆಗ 5 ಜನ ಆರೋಪಿತರು ಅಲ್ಲಿಗೆ ಬಂದು, 1 ನೇ ಆರೋಪಿ ನನ್ನ ಹೆಂಡತಿಗೆ ಎಲೇ ಬೋಸುಡಿ ಗಂಡಸರ ಮಧ್ಯೆ ನಿನ್ನದೇನು ಇದೆ, ದೂರ ಸರಿ ಎಂದು ಅವಾಚ್ಯವಾಗಿ ಬೈದರು. 3 & 4 ನೇ ಆರೋಪಿತರು ನನ್ನ ಹೆಂಡತಿಯ ಸೀರೆ ಹಿಡಿದು ಎಳೆದಾಡಿ, ಕೂದಲು ಹಿಡಿದು ಎಳೆದಾಡಿದರು. 5 ನೇ ಆರೋಪಿ ಎಡಗಾಲಿನ ಚಪ್ಪಲಿಯಿಂದ ನನ್ನ ಎಡಗಣ್ಣಿಗೆ ಹೊಡೆದರು, ಅದರಿಂದ ನನ್ನ ಕಣ್ಣಿಗೆ ಗುಮುಟಿ ಆಗಿತ್ತು. 2 ನೇ ಆರೋಪಿ ಕಟ್ಟಿಗೆಯಿಂದ ಚಾಸಾ-3 ರವರಿಗೆ ತಲೆಗೆ ಹೊಡೆದಿದ್ದು, ಅದರಿಂದ ಅವರಿಗೆ ಬಲವಾದ ರಕ್ತಗಾಯವಾಗಿತ್ತು. ಆಗ ದಾರಿಯಲ್ಲಿ ಹೋಗುತ್ತಿದ್ದ ಚಾಸಾ-4 & 5 ರವರು ಜಗಳ ಬಿಡಿಸಿದ್ದರು. ಆಗ 1 ನೇ ಆರೋಪಿ ಸದರಿ ಆಸ್ತಿ ನನ್ನ ಹೆಸರಿನಲ್ಲಿದೆ, ನಾನೇ ಬೆಳೆಯನ್ನು ಕಟಾವು ಮಾಡುತ್ತೇನೆ, ಇಲ್ಲವಾದರೆ ನಿಮ್ಮನ್ನು ಇಲ್ಲಿಯೇ ಧಫನ್ ಮಾಡುತ್ತೇನೆ ಎಂದು ಜೀವದ ಬೆದರಿಕೆ ಹಾಕಿದ್ದರು.

ಚಾಸಾ-3 ರವರಿಗೆ & ನಮಗೆ ಬಲವಾದ ಪೆಟ್ಟುಗಳಾಗಿದ್ದರಿಂದ ಸರ್ಕಾರಿ ಆಸ್ಪತ್ರೆಗೆ ಹೋಗಿ ದಾಖಲಾಗಿದ್ದೆವು.

ಘಟನೆಯಾದ ಮರುದಿನ ಮ.12 ಗಂಟೆಗೆ ನಾನು & ಚಾಸಾ-1 ರವರು ಹೋಗಿ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟೆವು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ. 1 & 2 ನ್ನು ನೋಡಿ ಗುರುತಿಸಿರುತ್ತಾರೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ಆರೋಪಿತರೆಲ್ಲರೂ ಸೇರಿ ನಿಮಗೆ ಹೊಡೆಯುತ್ತಿದ್ದಾಗ ಚಾಸಾ-1 ರವರು ಸಹ ಜಗಳ ಬಿಡಿಸಿದ್ದರು ಎಂದರೆ ಸಾಕ್ಷಿಯು ಚಾಸಾ-4 & 5 ರವರು ಮಾತ್ರ ಬಿಡಿಸಿದ್ದರು ಎನ್ನುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

**ಆರೋಪಿತರ ಪರ ವಕೀಲರು ತಮ್ಮ ಹಿರಿಯ ವಕೀಲರು ಬೇರೆ ಕೇಸಿನ ಸಲುವಾಗಿ ಬೇರೆ ಊರಿಗೆ ಹೋಗಿದ್ದಾರೆ ಎಂದು ತಿಳಿಸಿದ್ದು, ಸದರಿ ಕಾರಣ ಸಕಾರಣ ಅಲ್ಲದ ಕಾರಣ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರು ವಿಚಾರಣೆ ಇಲ್ಲ</u>.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**